ಕರ್ನಾಟಕ ಸರ್ಕಾರ

<u>ತಾಂತ್ರಿಕ ಶಿಕ್ಷಣ ಇಲಾಖೆ</u>

ಸಂಖ್ಯೆ: ಬಿಟಿಇ/32/ಇಸಿಎಸ್(2)/2025

ಆಯುಕ್ತರವರ ಕಛೇರಿ
ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ
ಅರಮನೆ ರಸ್ತೆ, ಬೆಂಗಳೂರು -560001
ದೂರವಾಣಿ ಸಂಖ್ಯೆ:080-2220777
email:dte.commissioner@gmail.com

ದಿನಾಂಕ:20.03.2025

## <u>ಸುತ್ತೋಲೆ</u>

ವಿಷಯ: ನವೆಂಬರ್/ಡಿಸೆಂಬರ್ 2024ರ ರ ಡಿಪ್ಲೋಮ ಸೆಮಿಸ್ಟರ್ ಥಿಯರಿ ಪರೀಕ್ಷೆಗಳ ಮೌಲ್ಯಮಾಪನವಾದ ಉತ್ತರಪತ್ರಿಕೆಗಳ ಮರುಮೌಲ್ಯಮಾಪನ (3rd Valuation) ಕ್ಕೆ ಉಪನ್ಯಾಸಕರನ್ನು ನಿಯೋಜಿಸುವ ಬಗ್ಗೆ.

ಉಲ್ಲೇಖ: 1.ಈ ಕಛೇರಿ ಸುತ್ತೋಲೆ ಸಂಖ್ಯೆ: ಬಿಟಿಇ/32/ಇಸಿಎಸ್(2)/2024 ದಿ: 10.03.2025
2.ಈ ಕಛೇರಿ ಜ್ಞಾಪನ ಸಂಖ್ಯೆ: ಬಿಟಿಇ/32/ಇಸಿಎಸ್(2)/2024 ದಿ: 10.03.2025
3.ಸರ್ಕಾರಿ ಆದೇಶ ಸಂ:ಇಡಿ/57/ಟಿಪಿಇ/2013 ಬೆಂಗಳೂರು ದಿ: 17.04.2015
4.ಸರ್ಕಾರಿ ತಿದ್ದುಪಡಿ ಆದೇಶಸಂ:ಇಡಿ/87/ಟಿಪಿಇ/2023 ಬೆಂಗಳೂರು ದಿ:16.02.2024
5.ತಾಂತ್ರಿಕ ಪರೀಕ್ಷಾ ಮಂಡಳಿಯ 184ನೇ ವಿಶೇಷ ಕೇಂದ್ರ ಸಭೆಯ ನಿರ್ಣಯ 184.3&184.4

***********

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ನವೆಂಬರ್ 2024ರ ಡಿಪ್ಲೋಮ ಸೆಮಿಸ್ಟರ್ ಥಿಯರಿ ಪರೀಕ್ಷೆಗಳ ಮೌಲ್ಯಮಾಪನವಾದ ಉತ್ತರಪತ್ರಿಕೆಗಳ ಮರುಮೌಲ್ಯಮಾಪನ (3rd Valuation) ಕಾರ್ಯವನ್ನು ದಿನಾಂಕ:24.03.2025 ರಂದು <u>ಸರ್ಕಾರಿ ಮುದ್ರಣ ಸಂಸ್ಥೆ ಅರಮನೆ ರಸ್ತೆ, ಬೆಂಗಳೂರು</u> ಇಲ್ಲಿ ನಡೆಸಲು ಕ್ರಮಕೈಗೊಳ್ಳಲಾಗಿದೆ. ಸದರಿ ಮರುಮೌಲ್ಯಮಾಪನ ಕಾರ್ಯಕ್ಕೆ ನಿಯೋಜಿಸಲಾದ ಉಪನ್ಯಾಸಕರ ಪಟ್ಟಿಯನ್ನು BTELinx ವೆಬ್‌ಪೋರ್ಟಲ್ ನಲ್ಲಿ ಪ್ರಕಟಿಸಲಾಗುವುದು. ಪಟ್ಟಿಯಲ್ಲಿ ನಮೂದಿಸಲಾಗಿರುವ ಉಪನ್ಯಾಸಕರನ್ನು ಕಡ್ಡಾಯವಾಗಿ ಮರುಮೌಲ್ಯಮಾಪನ ಕಾರ್ಯಕ್ಕೆ ನಿಯೋಜಿಸುವಂತೆ ಹಾಗೂ ಉಪನ್ಯಾಸಕರಿಗೆ ಯಾವುದೇ ರೀತಿಯ ರಜೆ ಮಂಜೂರು ಮಾಡಬಾರದೆಂದು ಸಂಬಂಧಪಟ್ಟ ಪಾಲಿಟೆಕ್ನಿಕ್‌ಗಳ ಪ್ರಿನ್ಸಿಪಾಲರುಗಳಿಗೆ ಸ್ಪಷ್ಟವಾಗಿ ತಿಳಿಸಲಾಗಿದೆ.

ಮರುಮೌಲ್ಯಮಾಪನ ಪ್ರಕ್ರಿಯೆಯಲ್ಲಿ ಕರ್ತವ್ಯಲೋಪವೆಸಗುವ ಉಪನ್ಯಾಸಕರ ಮೇಲೆ ಉಲ್ಲೇಖಿತ ಸರ್ಕಾರಿ ಆದೇಶಗಳ ಪ್ರಕಾರ ಕ್ರಮಕೈಗೊಳ್ಳಲಾಗುವುದು ಹಾಗೂ ಮರುಮೌಲ್ಯಮಾಪನ ಕಾರ್ಯಕ್ಕೆ ನಿಯೋಜಿಸಲ್ಪಟ್ಟ ಉಪನ್ಯಾಸಕರುಗಳು ಗೈರುಹಾಜರಾದರೆ, ಗೈರು ಹಾಜರಾದ ಅವಧಿಯ ವೇತನವನ್ನು ತಾಂತ್ರಿಕ ಪರೀಕ್ಷಾ ಮಂಡಳಿಯ 151ನೇ ಕೇಂದ್ರ ಸಭೆಯ ನಿರ್ಣಯ 151.3.5ರ ಅನ್ವಯ ಕಟಾಯಿಸಲಾಗುವುದು ಮತ್ತು ಮತ್ತು 171ನೇ ಕೇಂದ್ರ ಸಭೆಯ ನಿರ್ಣಯ 171.3.7(3) ಮತ್ತು 184ನೇ ವಿಶೇಷ ಕೇಂದ್ರ ಸಭೆಯ ನಿರ್ಣಯ 184.4 ಪ್ರಕಾರ ಕ್ರಮ ಜರುಗಿಸಲಾಗುವುದೆಂದು ಈ ಮೂಲಕ ತಿಳಿಸಲಾಗಿದೆ. ಮರುಮೌಲ್ಯಮಾಪನ ಕಾರ್ಯಕ್ಕೆ ಉಪನ್ಯಾಸಕರನ್ನು ಬಿಡುಗಡೆಗೊಳಿಸದ ಪ್ರಿನ್ಸಿಪಾಲರುಗಳನ್ನು ಮುಂದಿನ ಆಗುಹೋಗುಗಳಿಗೆ ನೇರ ಹೊಣೆಗಾರರನ್ನಾಗಿಸಿ ಸೂಕ್ತ ಶಿಸ್ತು ಕ್ರಮ ಜರುಗಿಸಲಾಗುವುದು ಎಂದು ಎಚ್ಚರಿಸಲಾಗಿದೆ.

ಕಾರ್ಯದರ್ಶಿ

ಇವರಿಗೆ,

1. ಸಂಬಂಧಪಟ್ಟ ಪಾಲಿಟೆಕ್ನಿಕ್‌ಗಳ ಪ್ರಿನ್ಸಿಪಾಲರುಗಳಿಗೆ- ಸೂಕ್ತ ಕ್ರಮಕ್ಕಾಗಿ
2. ಮರುಮೌಲ್ಯಮಾಪನ ಕೇಂದ್ರದ ಮರುಮೌಲ್ಯಮಾಪಕರುಗಳಿಗೆ- ಶಿಬಿರದ ಮೇಲ್ವಿಚಾರಕರಿಂದ ಪರಿಚಲನೆ ಮೂಲಕ

ಪ್ರತಿ: 1. ಶಿಬಿರಾಧಿಕಾರಿಗಳು- ಮುಂದಿನ ಕ್ರಮಕ್ಕಾಗಿ
2. ಶಿಬಿರದ ಮೇಲ್ವಿಚಾರುಕರುಗಳಿಗೆ
3. ಆಯುಕ್ತರವರ ಆಪ್ತಶಾಖೆ 4. ನಿರ್ದೇಶಕರವರ ಆಪ್ತಶಾಖೆ

Scanned with OKEN Scanner